ಮಾಡ್ಕೊಂಡೋನು ನಾನು. ನೀನು ಇಷ್ಟ ಆಗ್ದಿದ್ರೆ ನಾನ್ಯಾಕೆ ನಿನ್ನ ಮದುವೆ ಆಗ್ತಿದ್ದೆ? ಅದೂ ಅಲ್ದೆ..."

"ಅದೂ ಅಲ್ದೆ?"

"ಚಂದದ ಪೀಳಿಗೆ ಮಾತ್ರಾ ಮುಂದುವರಿದ್ರೆ ಸಾಕಾ ಕಸ್ತೂರಿ? ಬುದ್ಧಿವಂತ ಪೀಳಿಗೇನೂ ಬೆಳೀಲಿ..."

ಕಸ್ತೂರಿಯ ಮುಖಕ್ಕೆ ರಂಗೇರಿತ್ತು. ಯಾರು ಹೇಗೇ ಇರಲಿ, ರಾಜೀವ ತನ್ನನ್ನು ಪ್ರೀತಿಯಿಂದ, ಗೌರವದಿಂದ ನಡೆಸಿಕೊಳ್ಳುತ್ತಾನೆ. ಅವನ ಒಲುಮೆಗೆ ಕುಂದೆಣಿಸುವ ಕೆಲಸ ತನ್ನಿಂದಾಗಬಾರದು. ಅವನ ಪ್ರೀತಿಯ ಅಮ್ಮನನ್ನು ತನ್ನ ಅಮ್ಮನಂತೆ ನೋಡಿಕೊಳ್ಳುತ್ತೇನೆ. ಇಲ್ಲಿರುವವರೆಗೆ ಈ ಮನೆ ತನ್ನದೆಂದು ಭಾವಿಸುತ್ತೇನೆ. ತನ್ನ ತೌರು ಬೇರೆಯಲ್ಲ, ಗಂಡನ ಮನೆ ಬೇರೆಯಲ್ಲ. ತನ್ನ ನಿರ್ಧಾರದಿಂದ ಕಸ್ತೂರಿಯ ಮನಸ್ಸು ಹಗುರಾದರೂ ಆಗೀಗ ಸನ್ನಿವೇಶಗಳು ಕಾರಣವಾಗಿ ಅವಳ ಚಿತ್ತಶಾಂತಿ ಕಲಕುತ್ತಿತ್ತು. ಹಾಗೆಯೇ ತಿಳಿಯೂ ಆಗುತ್ತಿತ್ತು. ನಡುವಿನ ಅವಧಿಯಲ್ಲಿ ಗಂಡನನ್ನು ದೂರುವ ಮಾತಾಡಿದರೂ ಹಾಗೆ ಮಾತಾಡಿದ್ದು ತಪ್ಪು ಎಂದು ಬಹುಬೇಗ ಅರಿತುಕೊಳ್ಳುವಷ್ಟು ಅವಳು ಪಕ್ವವಾಗಿದ್ದಳು, ಕಳೆದ ಎರಡು ವರ್ಷಗಳಲ್ಲಿ.

★★★

ಬ್ಯಾಂಕ್ ಪರೀಕ್ಷೆ ಪಾಸು ಮಾಡಿಕೊಂಡು, ಯಶಸ್ವಿಯಾಗಿ ಸಂದರ್ಶನ ಮುಗಿಸಿ, ಕಸ್ತೂರಿ ಆಫೀಸರ್ ದರ್ಜೆಗೆ ಪದೋನ್ನತಿ ಹೊಂದಿದಳು. ಈಗಿದ್ದ ಜಾಗದಿಂದ ಬೇರೆ ಊರಿಗೆ ವರ್ಗಾವಣೆಯಾಯ್ತು. ಎರಡು ವರ್ಷ ಮೊದಲು ಇದ್ದೂರಿನ ಮತ್ತೊಂದು ಶಾಖೆಗೆ ಟ್ರಾನ್ಸ್‌ಫರ್ ಆಗಿದ್ದ ರಾಜೀವ ಹೆಂಡತಿಗೆ ವರ್ಗಾವಣೆ ಆದ ಕಡೆಗೆ ತಾನೂ ಸ್ಥಳಾಂತರಗೊಳ್ಳುವ ಪ್ರಯತ್ನ ನಡೆಸತೊಡಗಿದ. ನೌಕರಿಯಲ್ಲಿರುವವರಿಗೆ ಇದೆಲ್ಲಾ ಸಹಜ ಎಂದು ಭಾವಿಸಬೇಕಾದ ಅತ್ತೆ ಸುವರ್ಣ ಮಗ, ಸೊಸೆ ಬೇರೆ ಕಡೆ ಹೋಗಬೇಕಾದ ಸಂದರ್ಭ ಕಂಡು ವಿಚಲಿತರಾದರು. ಇಂತಾದ್ದೆಂದು

